ಓ ಎಸ್ .ನಂ.**376/2015**

**ಪಿಡಬ್ಲ್ಯು – 1**

ದಿನಾಂಕ **19-11-2025** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ನಂ.5 ಮತ್ತು 6 ಪರ ವಕೀಲರವರಿಂದ**

1. ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಎರಡು ಮೂರು ಸಲ ಹೋಗಿದ್ದೆ, ಖರೀದಿ ಆದ ನಂತರ 40 ರಿಂದ 50 ಸಲ ದಾವಾ ಆಸ್ತಿಗೆ ಹೋಗಿದ್ದೆ. ದಾವಾ ಆಸ್ತಿಯ ಛಾಯಾ ಚಿತ್ರವನ್ನು ನಾನು ತೆಗೆದಿಲ್ಲ. ದಾವಾ ಆಸ್ತಿಯ ಛಾಯಾ ಚಿತ್ರವನ್ನು ತೋರಿಸಿದರೆ ಗುರುತು ಹಿಡಿಯುತ್ತೇನೆ. ಸಾಕ್ಷಿಗೆ ದಾವಾ ಆಸ್ತಿಯ ಛಾಯಾ ಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಒಂದು ಚಿಕ್ಕ ಒಂದು ಕಟ್ಟಡ ಇರುತ್ತದೆ, ಆದರೆ ಅಲ್ಲಿ ಯಾವುದೇ ಬೋರ್ಡ್ ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಛಾಯಾಚಿತ್ರ ತೋರಿಸಲಾಗಿ ಅದರಲ್ಲಿ 5 ನೇ ಪ್ರತಿವಾದಿಯನ್ನು ನೋಡಿ ಗುರುತಿಸಿರುತ್ತಾರೆ, ಆದರೆ ಸದರಿ ಛಾಯಾ ಚಿತ್ರದಲ್ಲಿ ಇರುವ ಜಾಗ ನಮ್ಮದು ಅಲ್ಲ ಎಂದು ಹೇಳುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿಡಿ.2 ಎಂದು ಗುರುತಿಸಲಾಯಿತು.

2. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಸುನೀಲ್ ಟೆಂಗಿನ ಕಾಯಿ ಇವರ ಕಾಂಪ್ಲೆಕ್ಸ ಇರುತ್ತದೆ ಎಂದರೆ ಸರಿ. ಸದರಿ ಕಾಂಪ್ಲೆಕ್ಸ ದಲ್ಲಿ ಸಾಕಷ್ಟು ಅಂಗಡಿಗಳು ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣ ಭಾಗಕ್ಕೆ ಫರಸಿಕಲ್ಲು ಮಾರಾಟ ಮಾಡುವ ಅಂಗಡಿ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಫರಸಿಕಲ್ಲು ಮಾರಾಟ ಮಾಡುವವರ ಮನೆಯು ಸಹ ಅಲ್ಲಿಯೇ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ, ಆದರೆ ಹಿಂದುಗಡೆ ವೆಂಕಟೇಶ್ವರ ಕಾಂಪ್ಲೆಕ್ಸ ಇರುತ್ತದೆ ಎಂದು ಹೇಳುತ್ತಾರೆ. ಉತ್ತರ ದಿಕ್ಕಿಗೆ ರಸ್ತೆ ದಾಟಿದ ನಂತರ ಸಾಕಷ್ಟು ಛಾಯಾ ಚಿತ್ರದ ಅಂಗಡಿಗಳು ಇರುತ್ತದೆ ಎಂದರೆ ಸರಿ. ಛಾಯಾ

ಚಿತ್ರದ ಅಂಗಡಿಗಳಿಗೆ ಹೋಗಿ ದಾವಾ ಆಸ್ತಿಯ ಬಗ್ಗೆ ಕೇಳಿದಿರಾ ಎಂದರೆ ಸಾಕ್ಷಿಯು 3–4 ಜನರಿಗೆ ವಿಚಾರಿಸಿದ್ದೇನೆ ಎಂದು ಹೇಳುತ್ತಾರೆ. ಅವರ ಹೆಸರು ಹೇಳಲಿಕ್ಕೆ ಬರುವುದಿಲ್ಲ. ಸದರಿ ಆಸ್ತಿಯ ಮಾಲೀಕತ್ವದ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಅಲ್ಲಿ ಯಾರು ಕಬ್ಜೆಯಲ್ಲಿ ಇದ್ದಾರೆ ಎಂದು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಮುಚ್ಚಿದ್ದ ಅಂಗಡಿಗಳು ಮಾತ್ರ ಇದ್ದವು ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ತಂತಿ ಬೇಲಿ ಇರುತ್ತದೆ ಎಂದರೆ ಸರಿಯಲ್ಲ. ಒಂದು ಗೇಟ್ ಇರುತ್ತದೆ ಎಂದರೆ ಮುಂದುಗಡೆ ಇರುತ್ತದೆ ಎಂದು ಹೇಳುತ್ತಾರೆ. ಗೇಟ್ ಹಚ್ಚಿದ ಜಾಗದಲ್ಲಿ ಯಾವುದಾದರೂ ಕಟ್ಟಡ ಇದೆಯಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸದರಿ ಗೇಟ್ ನ ಮುಖಾಂತರ ದಾವಾ ಆಸ್ತಿಯ ಒಳಗಡೆ ಹೋಗಬೇಕು ಎಂದರೆ ಸರಿ. ದಾವಾ ಆಸ್ತಿಗೆ ತಂತಿ ಬೇಲಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವೆ ಮಾಡುವುದಕ್ಕಿಂತ ಮುಂಚೆ 5 ಮತ್ತು 6 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಯಾವ ರೀತಿ ಕಬ್ಜೆಯಲ್ಲಿ ಇರುತ್ತಾರೆ ಎಂದು ವಿಚಾರಣೆ ಮಾಡಿದೀರಾ ಎಂದರೆ ಸಾಕ್ಷಿಯು ಅವರು ಕಾನೂನು ಬಾಹಿರವಾಗಿ ಉಪಬಾಡಿಗೆದಾರರು ಎಂದು ಇದ್ದಾರೆ ಎಂದು ನನಗೆ ನಂತರ ಗೊತ್ತಾಯಿತು ಎಂದು ಹೇಳುತ್ತಾರೆ. ಆ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ. 5 ಮತ್ತು 6 ನೇ ಪ್ರತಿವಾದಿಯರು ಉಪಬಾಡಿಗೆದಾರರು ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವೆ ಮಾಡುವುದಕ್ಕಿಂತ ಮುಂಚೆ ಪ್ರತಿವಾದಿಯರಿಗೆ ನೋಟಿಸು ನೀಡಿರುತ್ತೇನೆ. ನೋಟಿಸಿಗೆ ಪ್ರತಿವಾದಿಯರು ಉತ್ತರ ಕೊಟ್ಟಿರುತ್ತಾರೆ. ಏನು ಉತ್ತರ ಕೊಟ್ಟಿರುತ್ತಾರೆ ಎಂದು ಈಗ ನನಗೆ ನೆನಪಿಲ್ಲ. ಸದರಿ ಉತ್ತರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಗ್ಗೆ ನನಗೆ ನೆನಪಿಲ್ಲ. ನೋಟಿಸನಲ್ಲಿ 1 ರಿಂದ 6 ನೇ ಪ್ರತಿವಾದಿಯರು ಹಾಗೂ ನನ್ನ ಮಧ್ಯೆ ಯಾವುದೇ ಬಾಡಿಗೆದಾರರು ಹಾಗೂ ಮಾಲೀಕರು ಎಂಬ ಸಂಬಂಧ ಇಲ್ಲ ಎಂದು ನೋಟಿಸ್ ದಲ್ಲಿ ಬರೆದುಕೊಂಡಿದ್ದೇನೆ

ಎಂದರೆ ಸರಿಯಲ್ಲ. ಸದರಿ ಒಪ್ಪಿಕೊಳ್ಳದ ನೋಟಿಸ ನ ಭಾಗವನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. 1 ರಿಂದ 6 ನೇ ಪ್ರತಿವಾದಿಯರು ಹಾಗೂ ಮೂಲ ಮಾಲೀಕರಾದ ಟೆಂಗಿನ ಕಾಯಿ ಇವರ ಮಧ್ಯೆ ಯಾವುದೇ ಬಾಡಿಗೆದಾರರು ಹಾಗೂ ಮಾಲೀಕರು ಎಂಬ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಮುಂದುವರೆಯಲು ಯಾವುದೇ ಹಕ್ಕು ಹಾಗೂ ಅಧಿಕಾರ ಇಲ್ಲ ಎಂದು ನನ್ನ ನೋಟಿಸನಲ್ಲಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು 1 ರಿಂದ 4 ನೇ ಪ್ರತಿವಾದಿಯರು ನಮ್ಮ ಖರೀದಿ ಕೊಟ್ಟವರ ಬಾಡಿಗೆದಾರ ಇದ್ದ ಬಗ್ಗೆ ಒಪ್ಪಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. 1 ರಿಂದ 4 ನೇ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜೆಯಲ್ಲಿ ಇಲ್ಲ ಎಂದರೆ ಸಾಕ್ಷಿಯು ಹಳೇ ಕಟ್ಟಡಕ್ಕೆ ಬೀಗ ಹಾಕಿಕೊಂಡು 1 ರಿಂದ 4 ನೇ ಪ್ರತಿವಾದಿಯರು ಇರುತ್ತಾರೆ ಎಂದು ಹೇಳುತ್ತಾರೆ. 5 ಮತ್ತು 6 ನೇ ಪ್ರತಿವಾದಿಯರು ಸಹ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಅವರು ಕಬ್ಜೆಯಲ್ಲಿ ಇರುತ್ತಾರೆ ಎಂದು ಮಾಹಿತಿ ಇದೆ ಎಂದು ಹೇಳುತ್ತಾರೆ. 5 ಮತ್ತು 6 ನೇ ಪ್ರತಿವಾದಿಯರು ಏನು ಉದ್ಯೋಗ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. 5 ಮತ್ತು 6 ನೇ ಪ್ರತಿವಾದಿಯರು ಅಲ್ಲಿ ಉದ್ಯೋಗ ಮಾಡುವುದನ್ನು ನಾನು ನೋಡಿಲ್ಲ ಎಂದರೆ ಸರಿ.

5. ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಲು ನಕ್ಷೆಯನ್ನು ತಯಾರಿಸಿದ್ದೀರಾ ಎಂದರೆ ಸಾಕ್ಷಿಯು ಇಂಜಿನಿಯರ್ ಗೆ ಕೊಟ್ಟಿದ್ದೇವೆ ಆದರೆ ಇನ್ನು ತಯಾರಿಸಿಲ್ಲ ಎಂದು ಹೇಳುತ್ತಾರೆ. ಯಾವ ಇಂಜಿನೀಯರ್ ಗೆ ಕೊಟ್ಟಿದ್ದೀರಿ ಎಂದರೆ ಮೀತಾ ಜೈನ ರವರಿಗೆ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಮೀತಾ ಜೈನ ರವರು ದಾವಾ ಆಸ್ತಿಗೆ ಬಂದು ನೋಡಿಲ್ಲ, ಆದರೆ ವಿಡಿಯೋ ಕಾಲ್ ದಲ್ಲಿ ತೋರಿಸಿರುತ್ತೇನೆ ಎಂದು ಹೇಳುತ್ತಾರೆ. ಮೀತಾ ಜೈನ ರವರಿಗೆ ನಕ್ಷೆ ತಯಾರಿಸಲು ಕೊಟ್ಟಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ಮೀತಾ ಜೈನ ರವರ ಕಡೆಗೆ ನಕ್ಷೆ ತಯಾರಿಸಲು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾಣಿಜ್ಯ ಕಟ್ಟಡ ಕಟ್ಟಬೇಕು ಎಂದು ತೀರ್ಮಾನ ಮಾಡಿದ್ದೇನೆ.

6. ದಾವಾ ಆಸ್ತಿ 2000 sq. meter ಇರುತ್ತದೆ ಎಂದರೆ ಸಾಕ್ಷಿಯು ಅಂದಾಜು ಮೂರುವರೆ ಗುಂಟೆ ಜಾಗ ಇರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಮೂರುವರೆ ಗುಂಟೆ ಬರೆಸಿದ್ದೀರಾ ಅಥವಾ 2000 sq.meter ಬರೆಸಿದ್ದೀರಾ ಎಂದರೆ ನೆನಪಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ನಿರ್ದಿಷ್ಟವಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

7. ಧಾರವಾಡ ಹಾಗೂ ಹುಬ್ಬಳ್ಳಿಯಲ್ಲಿ ಒಟ್ಟು ಎಷ್ಟು ಕೇಸ್ ಇವೆ ಎಂದರೆ ಸಾಕ್ಷಿಯು ಒಂದು ಕೇಸ್ ನಾನು ಖರೀದಿ ಮಾಡಿದ ಇನ್ನೊಂದು ಆಸ್ತಿ ಮೇಲೆ ಪಾಲು ಬೇಕು ಎಂದು ಹಾಕಿರುತ್ತಾಳೆ. ಸದರಿ ದಾವೆಯು ಗೌರವಾನ್ವಿತ ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇದೆ ಎಂದರೆ ಸಾಕ್ಷಿಯು ನ್ಯಾಯಾಲಯದ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಾವೆಯು ಓ ಎಸ್ ನಂ.39/2022 ಇರಬಹುದು ಎಂದು ಹೇಳುತ್ತಾರೆ. ಇದೇ ರೀತಿ ಹುಬ್ಬಳ್ಳಿ ಹಾಗೂ ಬೆಳಗಾವಿ ನ್ಯಾಯಾಲಯಗಳಲ್ಲಿ ದಾವೆಗಳು ನನ್ನವು ಇರುತ್ತವೆ ಎಂದರೆ ಸರಿಯಲ್ಲ. ನಾನು ತಕರಾರು ಇರುವ ಆಸ್ತಿಗಳನ್ನು ಖರೀದಿ ಮಾಡಿ ನ್ಯಾಯಾಲಯದಲ್ಲಿ ದಾವೆಗಳನ್ನು ಸಲ್ಲಿಸುತ್ತೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯನ್ನು ನಾನು ಬೋಗಸ್ ಆಗಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಬಂಧ ಪಟ್ಟ ನ್ಯಾಯಾಲಯದಲ್ಲಿ ಈ ದಾವೆ ಮಾಡಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದ ಮೌಲ್ಯದ ಪ್ರಕಾರ ನ್ಯಾಯಾಲಯದ ಶುಲ್ಕವನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ.

9. ಸಾಕ್ಷಿಗೆ ಒಂದು ವಿದ್ಯುತ ಬಿಲ್ ನ್ನು ತೋರಿಸಲಾಗಿ ವಿದ್ಯುತ್ ಬಿಲ್ ಇರುತ್ತದೆ ಎಂದು ಸೂಚಿಸಲಾಗಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ವಿದ್ಯುತ್ ಸೌಕರ್ಯ ಇರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ವಿದ್ಯುತ್ ಸಂಪರ್ಕ ಯಾರ ಹೆಸರಿಗೆ ಇರುತ್ತದೆ ಎಂಬುದು ನನಗೆ ಗೊತ್ತಿಲ್ಲ, ಆದರೆ ನಾನು ಮೊದಲು

ನನ್ನ ಹೆಸರಿನಲ್ಲಿ ಮಾಡಿಕೊಂಡಿದ್ದೆ ಎಂದು ಹೇಳುತ್ತಾರೆ. ಈಗ ವಿದ್ಯುತ್ ಚ್ಛಕ್ತಿ ಸಂಪರ್ಕ ಯಾರ ಹೆಸರಿನಲ್ಲಿ ಇರುತ್ತದೆ ಎಂದು ಗೊತ್ತಿಲ್ಲ. ಪ್ರತಿ ತಿಂಗಳು ವಿದ್ಯುತ್ ಚ್ಛಕ್ತಿ ಬಿಲ್ ಬರುತ್ತದೆ ಎಂದರೆ ಗೊತ್ತಿಲ್ಲ. ವಿದ್ಯುತ್ ಚ್ಛಕ್ತಿ ಸಂಪರ್ಕ ನನ್ನ ಹೆಸರು ಕಡಿಮೆ ಆಗಿ ಈಗ ಯಾರ ಹೆಸರಿಗೆ ಇರುತ್ತದೆ ಎಂಬುದು ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿದ್ಯುತ್ ಚ್ಛಕ್ತಿ ಸಂಪರ್ಕ ಈಗ 5 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿ ತಿಂಗಳು ರೂ.4,000/– ಕ್ಕಿಂತ ಹೆಚ್ಚಿಗೆ ವಿದ್ಯುತ್ ಚ್ಛಕ್ತಿ ಬಿಲ್ ಬರುತ್ತದೆ ಎಂದರೆ ಗೊತ್ತಿಲ್ಲ. ನನಗೆ ದಾವಾ ಆಸ್ತಿಯ ಸ್ಥಿತಿ ಗತಿಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

**ಪಿಡಬ್ಲ್ಯು – 1**

**ಪಿಡಬ್ಲ್ಯು – 1**